# ನೀವು ಕೇಳಿದಿರಿ?

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ನನ್ನ ಮೊಮ್ಮಗ ಪ್ರಶ್ನೆ ಕೇಳುತ್ತಾನೆ, ಉತ್ತರಿಸಿದರೆ ಅದರ ಮೇಲೆ ಪ್ರಶ್ನೆ ಕೇಳುತ್ತಾನೆ. ಏನು ಮಾಡುವುದು?



ಗುಡ್. ನಿಮ್ಮ ಜ್ಞಾನ ಹಿಗ್ಗಲು ಕಾರಣವಾದವನಿಗೆ ಹಿಗ್ಗಿನಿಂದಲೇ ಉತ್ತರಿಸಿ.

ಅನಸೂಯ ಟಿ. ಕೇದಿಗೆಮನೆ

ಕೆಲವರಿಗೆ ತಮ್ಮ ಮನೆಯ ದೇವರ ಪೂಜೆಗೆ ಬೇರೆ ಮನೆಯವರ ಹೂವೇ ಆಗಬೇಕಲ್ಲ?

ಅದು ಹಳೆಯದಾಯಿತು. ಈಗ ತಮ್ಮ ಮನೆಯ ನೆಟ್‌ವರ್ಕ್‌ಗೆ ಪಕ್ಕದವರ ವೈಫೈಯೇ ಶ್ರೇಷ್ಠ.

ಸತ್ಯನಾರಾಯಣರಾವ್, ಬೆಂಗಳೂರು

ನಿಮ್ಮ ಉತ್ತರಾಧಿಕಾರಿ ರಹೀಂ ಅಂತೆ. ಹೌದೆ?

ರಹೀಂ ಎಂದರೆ ಕರುಣಾಳು; ಇಲ್ಲಿಗೆ ಬೇಕಾದ್ದು ಪರಿಪಕ್ವ ಜಾಣ ರಶ್ದಿ.

ಬಿ.ಆರ್, ಉಷಾ, ಬೆಂಗಳೂರು

ಉತ್ತರ ಕೊಡುವುದಕ್ಕೆ ಟ್ರೈನಿಂಗ್ ತೊಗೊಂಡಿದ್ರಾ?

ನೀರಿನ ಹರಿವಿಗೆ ತರಬೇತಿ ಬೇಕಿಲ್ಲ, ಸೆಲೆ ಬೇಕಷ್ಟೆ.

ಜಯವಂತ ಪೈ, ಕುಂದಾಪುರ

ಶುದ್ಧ ದನದ ಹಾಲು ಎನ್ನುವರಲ್ಲಾ, ಶುದ್ಧ ಎನ್ನುವುದು ದನಕ್ಕೆ ಸಂಬಂಧಿಸಿದ್ದೋ, ಹಾಲಿಗೋ?



ಎರಡಕ್ಕೂ. ಕೆಚ್ಚಲನ್ನು ತೊಳೆದೇ ಹಾಲು ಕರೆದಿದ್ದೇವೆ ಎಂದರ್ಥ!

ಸಾಗರೀ, ಬೆಂಗಳೂರು

ಕುತೂಹಲದ ಪ್ರಶ್ನೆಗೆ ಮುಜುಗರ ಪಡುವಂಥ ಉತ್ತರ ಸಿಕ್ಕರೆ ಹೇಗೆ?

ಮುಜುಗರ ಪಡುವಂಥ ಪ್ರಶ್ನೆ ಕಳುಹಿಸಿ. ಕುತೂಹಲದ ಉತ್ತರ ನೀಡಿ ಸರಿಪಡಿಸುತ್ತೇನೆ.

ಮೈ. ಸತೀಶ್ ಕುಮಾರ್, ಬಂಗಾರಪೇಟೆ

ಮೂರ್ಛೆಗೂ, ನಿದ್ರೆಗೂ ವ್ಯತ್ಯಾಸವೇನು?

ಬೇಡವೆಂದರೂ ಬರುವಂಥದ್ದು ಮೂರ್ಛೆ; ಬೇಕೆಂದರೂ ಬರದಿರುವುದು ನಿದ್ರೆ.

ಪಿ.ಜೆ. ರಾಘವೇಂದ್ರ, ಮೈಸೂರು

ಪ್ರಶ್ನೆಗಳದು ಸುರಿಮಳೆಯಾದರೆ ಉತ್ತರಗಳದು?

ಪ್ರಶ್ನೆಮಳೆಯಿಂದ ಉತ್ಪತ್ತಿಯಾದ ಸುಪುಷ್ಟ ಬೆಳೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ರಾಜಕೀಯದಲ್ಲಿ ಹೆಚ್ಚು ಬೆಲೆ ಇರುವುದು ನಾರದನಿಗೋ, ಶಕುನಿಗೋ?

ನಾರದ' ಅಲ್ಲ, 'ನಾರುವ' ಬುದ್ಧಿಯ ಶಕುನಿಗೇ.

ಸಿ.ಆರ್. ಶ್ರೀನಿವಾಸ, ಬೆಂಗಳೂರು

ರಾಮಾಯಣ, ಮಹಾಭಾರತದ ಕಾಲದಲ್ಲಿ ಮೊಬೈಲ್ ಇದ್ದಿದ್ದರೆ?

ರಾವಣ, ದುರ್ಯೋಧನರು ಜ್ಯಾಮರ್‌ಗಳನ್ನು ಅಳವಡಿಸುತ್ತಿದ್ದರು.

ಮಧುರ ಸುಬ್ರಹ್ಮಣ್ಯ, ಬೆಂಗಳೂರು

ಇಷ್ಟು ದಿನ ನೀವು ಪುಲ್ಲಿಂಗ ಎಂದುಕೊಂಡಿದ್ದೆ. ಈಗ ತಿಳಿಯಿತು ಸ್ತ್ರೀ ಎಂದು. ಉತ್ತರಿಸುವಿರಾ?

ಸ್ತ್ರೀಲಿಂಗಕ್ಕೇ ಹೆಚ್ಚಿನ ಪುಲ್ಲಿಂಗ್ ಪವರ್ ಇರುವುದು.

ಕಾವ್ಯಶ್ರೀ ಪತ್ರಿಮಠ, ಶೋರಾಪುರ

ಇಹಲೋಕದಲ್ಲಿ ಕಾಣದ ಶಾಂತಿ ಪರಲೋಕದಲ್ಲಿ ದೊರಕೀತೇ?

ಶಾಂತಿ ಸಿಗುವುದೇ ಪರಲೋಕದಲ್ಲಿ ನಿಮ್ಮ ಪರ ಇರುವ ಲೋಕದಲ್ಲಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಪ್ರೀತಿಯ ಕರೆಗೂ, ಕಾಮದ ಕರೆಗೂ ವ್ಯತ್ಯಾಸವೇನು?

ಕಾಮದ ಕರೆ ಕಾಯ ಬೇಕು ಎನ್ನುತ್ತದೆ; ಪ್ರೀತಿಯ ಕರೆ ಕಾಯ(ರಕ್ಷಿಸ)ಬೇಕು ಎನ್ನುತ್ತದೆ.

ಡಾ. ಸೀಮಂತಿನಿ ದೇಸಾಯಿ. ಬೆಂಗಳೂರು

ರಾಮ್ ರಾಮ್, ಅಯೋಧ್ಯೆಯಿಂದ ಯಾವಾಗ ಬಂದಿರಿ, ಯಾವಾಗ ಹೋಗುವಿರಿ?

ಸುಳ್ಳುಭಕ್ತರು ಬಂದ ತಕ್ಷಣ ಹೊರಬಂದೆ; ಅವರು ಹೋದಮೇಲೆ ಒಳಹೋಗುತ್ತೇನೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

ಕರೋನ ವ್ಯಾಟ್ಸ್ಯಾಪ್ ಗ್ರೂಪ್ ಮಾಡಿರುವೆ. ಅದಕ್ಕೆ ನಿಮ್ಮನ್ನು ಸೇರಿಸಲೇ ಸರ್?

ಇರಿ, ನನ್ನ ಪ್ರೊಫೈಲ್‌ಗೆ ಪಿಪಿಇ ಹಾಕಿಬಿಡುತ್ತೇನೆ.

## ಬಹುಮಾನಿತ ಪ್ರಶ್ನೆ

ಜೆ.ಜೆ.ಹಳ್ಳಿ ಚಿದಾನಂದ್, ಹಿರಿಯೂರು

ಬಡವರು ವಿವಾಹವಾಗದಿದ್ದರೆ ದೇಶದಲ್ಲಿ ಕ್ರಮೇಣ ಬಡತನ ಕಡಿಮೆಯಾಗಿ ದೇಶ ಶ್ರೀಮಂತವಾಗುವುದಲ್ಲವೆ?

ಇದಕ್ಕೆ ಇಷ್ಟು ದೊಡ್ಡ ತ್ಯಾಗ ಬೇಕಾಗಿಲ್ಲ; ಭ್ರಷ್ಟರು ವರ್ಷಕ್ಕೊಂದು ವಾರ ಲಂಚ ಬಿಟ್ಟರೆ ಸಾಕು.

ಟಿ.ಕೆ. ಮೂರ್ತಿ, ಉಜಿರೆ

ಕಳ್ಳನನ್ನು ನಂಬಿದರೂ ಕುಳ್ಳನನ್ನು ನಂಬಬೇಡ ಇದರ ಒಳಾರ್ಥವೇನು ಸಾರ್?

ಕ್ಷಣದಲ್ಲಿ ತ್ರಿವಿಕ್ರಮರಾಗಿ ಬೆಳೆಯುವ ಸಾಮರ್ಥ್ಯ ಇರುವವರು, ಕಡೆಗಣಿಸದಿರು ಎಂದು.

ನಾಜ್ಯೋತಿ, ಹೂವಿನಹಡಗಲಿ

ವಕೀಲರು ಮತ್ತು ಪುರೋಹಿತರಲ್ಲಿ ಯಾರ ಸ್ನೇಹ ಹೆಚ್ಚು ಒಳ್ಳೆಯದು?

ಪುರೋಹಿತರದೇ ಕೊಟ್ಟ ದುಡ್ಡಿಗೆ ಕನಿಷ್ಠ ತೀರ್ಥಪ್ರಸಾದಗಳಾದರೂ ದೊರಕಿಯಾವು.

ಹೆಚ್.ಕೆ. ವಿಜಯಕುಮಾರ್, ಶಕ್ತಿನಗರ

ಕೊರೊನ ವೈರಸ್ 'ರುದ್ರತಾಂಡವ, ರಣಕೇಕೆ, ಮಹಾಮಾರಿ, ರಕ್ಕಸಿ' ಎಂದು ವಾಹಿನಿಗಳು ಹೆದರಿಸುವುದೇಕೆ?



ಉದ್ದೇಶವೇನಿಲ್ಲ. ಬೊಬ್ಬಿರಿಯುವುದು ಕಾಡು(ವ)ಪ್ರಾಣಿಗಳ ಸ್ವಭಾವ.

ಬಿಆರ್‌ಯು, ಬೆಂಗಳೂರು

ನನ್ನ ಪ್ರಶ್ನೆಗೆ ಉತ್ತರ ಕೊಡದಿದ್ದರೆ ಸುಪಾರಿ ಕೊಡಬೇಕಾಗುತ್ತದೆ. ಜೋಕ್!

ಒಳ್ಳೇ Joke. ಸುಪಾರಿಯವರೆ ನನ್ನೊಡನೆ ಕಾಲ ಕಳೆದು ನಕ್ಕು ಸಾಯುವುದರಿಂದ ನಿಮ್ಮಾಸೆ ಈಡೇರದು.

■ ರಾಮ್

ಪ್ರಶ್ನೆ ಕಳುಹಿಸಲು: **editorsu@sudha.co.in**